ಒಂದಾಣೆ ಮಾಲೆ. **147**

ಗಾನ ಕುಸುಮ

(ಸ್ವರಸಾಹಿತ್ಯ ಸಹಿತ ಮಕ್ಕಳ ಶೈಕ್ಷಣಿಕ ಹಾಡಿನ ಕೈಪಿಡಿ.)



ರಚಯಿತರು: ಶ್ರೀ। ಕೆ. ಎಸ್. ಪದ್ಮನಾಭ ಆಚಾರ್ಯ, ಕನ್ನಡ-ಹಿಂದಿ ವಿದ್ವಾನ್

ಇಪ್ಪತ್ತೊಂಭತ್ತು ಏಕಾಂಕ ನಾಟಕಗಳು.

(ಕೆಲವು 16+4 ಪುಟಗಳ; ಮತ್ತೆ ಕೆಲವು 20+4 ಪುಟಗಳು)

'ಒಂದಾಣೆ ಮಾಲೆ'ಯಲ್ಲಿ ಪ್ರಕಟವಾದ ಮೂವತ್ತು


ಏಕಾಂಕ ನಾಟಕಗಳಲ್ಲಿ ಈ ಕೆಳಗಿನವು(ಇಪ್ಪತ್ತೊಂಭತ್ತು) ದೊರೆವವು

೧	ನಾರೀಶ್ವರರು (ಪ್ರಹಸನ)	ಕುಡ್ಪಿ ವಾಸುದೇವ ಶೆಣೈ.
೨	ಬಾಬಿಗೆ ಬಾಸಿಗ ,,	,, ,, ,,
೩	ಸತ್ಯವಂತ ಬಾಬಿ ,,	,, ,, ,,
೪	ಮರ್ಜಿ ,,	ಡಾ। ಎನ್. ಎಸ್. ಕಾಮತ್.
೫	ಸತೀ ಸಾವಿತ್ರಿ (ಪೌರಾಣಿಕ)	ಶ್ರೀ। ಪಿ ವೆಂಕಟ್ರಮಣ ಭಟ್ಟ.
೬	ಅಕಾಂಡ ತಾಂಡವ (ರೇಡಿಯೊನಾಟಕ)	ಶ್ರೀ। ಬಿ ದಾಮೋದರ ಬಾಳಿಗ, ಬಿ ಎ
೭	ವೀರಬಾಯಿ (ಐತಿಹಾಸಿಕ)	ಶ್ರೀ। ಸಂ. ಜ. ರಾವ್.
೮	ಚುಟ್ಟ ಬಿಟ್ಟ ದಿಟ್ಟ (ಪ್ರಹಸನ)	ಡಾ। ಎಸ್. ಪಿ ಭಟ್.
೯	ಜರಾಸಂಧ ವಧೆ (ಪೌರಾಣಿಕ)	ಶ್ರೀ। ಕೆ. ವಿ. ಮಯ್ಯ.
೧೦	ಸತ್ಯಹರಿಶ್ಚಂದ್ರ (ಪೌರಾಣಿಕ)	ಶ್ರೀ। ಪಿ ವೆಂಕಟ್ರಮಣ ಭಟ್ಟ.
೧೧	ಮಾಯಾಮೃಗ (,,)	ಶ್ರೀ। ಎ. ವಿ. ಮಯ್ಯ.
೧೨	ಸತೀವೃಂದಾ (,,)	ಶ್ರೀ। ಕೆ. ಸುಭಾಷಚಂದ್ರ ಶೆಣೈ.
೧೩	ಗೌತಮನ ಗೃಹತ್ಯಾಗ, ಸಿದ್ಧಾರ್ಥನ ಕಾರುಣ್ಯ	ಶ್ರೀ। ಎಲ್. ಎಸ್. ನಾಯಕ.
೧೪	ಪುನರುಜ್ಜೀವನ (ಸಾಮಾಜಿಕ)	ಶ್ರೀ। ಗೋವಿಂದ ಭಟ್ಟ.
೧೫	ಸ್ವಾತಂತ್ರ್ಯ (,,)	ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೧೬	ಭಕ್ತ ಕುಚೇಲ (ಪೌರಾಣಿಕ)	ಶ್ರೀ। ಅಂಬಾತನಯ.
೧೭	ಮಸ್ತು ಅವಾಂತರ (ಪ್ರಹಸನ)	ಅಷ್ಟಾವಕ್ರ.
೧೮	ಗ್ರಾಮಸ್ವಾತಂತ್ರ್ಯ ,,	ಶ್ರೀ। ಎ. ವಿ. ಮಯ್ಯ.
೧೯	ಭಕ್ತ ಧ್ರುವ (ಪೌರಾಣಿಕ)	ಶ್ರೀ। ಸುಬ್ರಾಯ.
೨೦	ಬೇಡನ ಮಗಳು ,,	ಶ್ರೀ। ವೆಂಕಟರಾಜ ಪುಣಿಂಚತ್ತಾಯ.
೨೧	ಪುರಂದರದಾಸರು (ಐತಿಹಾಸಿಕ)	ಬಿ. ಪದ್ಮನಾಭ ಸೋಮಯಾಜಿ.
೨೨	ವೀರಾಗ್ರಣಿ ಕರ್ಣ (ಪೌರಾಣಿಕ)	ಶ್ರೀ। ಅಮ್ಮೆಂಬಳ ಅನಂತಯ್ಯ, ನಾವಡ.
೨೩	ಕುಶ-ಲವ ,,	ಶ್ರೀ। ಬಿ. ಈಶ್ವರಯ್ಯ.
೨೪	ಅಕ್ಷಯಪಾತ್ರೆ (ಸಾಮಾಜಿಕ)	ಶ್ರೀ। ಟಿ. ಚಂದ್ರರಾಜ ಸೆಟ್ಟಿ
೨೫	ವೈರಾಗ್ಯಸಿಧಿ (ತರಂಗರೂಪಕ)	ಶ್ರೀ। ಕೆ. ಎಸ್. ಶರ್ಮ, ವಿದ್ವಾನ್.
೨೬	ಭರತನ ಬಂಧುಪ್ರೇಮ (ಪೌರಾಣಿಕ)	ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೨೭.	ಮಹಾತ್ಮಾ ಉದಂಕ	ಶ್ರೀ। ಮಣಿಲ 'ಶಿವಶಂಕರ', ಪುಣಚಾ.
೨೮.	ಭಕ್ತ ಪ್ರಹ್ಲಾದ (ಪೌರಾಣಿಕ)	ಶ್ರೀ। ಎ. ವಿ. ಮಯ್ಯ.
೨೯.	ಅಭಿಮನ್ಯು ,,	ಶ್ರೀ। ಬಿ. ಈಶ್ವರಯ್ಯ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು.

ಒಂದು ಮಾತು.

"ಒಂದಾಣೆ ಮಾಲೆ"ಯಲ್ಲಿ ಈ ಮೊದಲು, ಮಕ್ಕಳ ಬಗ್ಗೆ ಹಾಡುಗಳ ಎರಡು ಪ್ರಕಟಣೆಗಳಾಗಿವೆ. ಈಗ ಪ್ರಕಟಿಸಿರುವ ಇಂಥ ಪುಸ್ತಕವು ಮೂರನೆಯದು.



ಈ ಗೀತಾಸಂಗ್ರಹದಲ್ಲಿ, ಸ್ವರ ಸಾಹಿತ್ಯವನ್ನೂ ಕೊಡಲಾಗಿದೆ. ಬಾಲಗೀತಾವಳಿಯಲ್ಲಿ ಹೀಗೆ ಸ್ವರಸಾಹಿತ್ಯವನ್ನು ಕೊಡುವುದು ಇದು ಪ್ರಥಮತಃವಾಗಿದೆ.

ಈ ಹಾಡುಗಳನ್ನು ಬರೆದಿರುವ ಶ್ರೀ| ಕೆ. ಎಸ್. ಪದ್ಮನಾಭ ಆಚಾರ್ಯರವರು, 'ಒಂದಾಣೆ ಮಾಲೆ' ಓದುಗರಿಗೆ ಸುಪರಿಚಿತರಾಗಿರುವರು. ಇವರ "ಮಕ್ಕಳ ಹಾಡುಗಳು" ("ಒಂದಾಣೆ ಮಾಲೆ"ಯ ವಿಶೇಷ ಪ್ರಕಟಣೆ) ಎರಡು ಸಲ ಮುದ್ರಿತವಾಗಿದೆ. ಶ್ರೀಯುತರು, ಈ ಪ್ರಕಟಣೆಯಲ್ಲಿನ ಹಾಡುಗಳನ್ನೂ, ಬುನಾದಿ ಶಿಕ್ಷಣ ರೀತಿಗನುಸಾರವಾಗಿ ರಚಿಸಿರುವರು. ಇವು, ಎರಡನೇ ತರಗತಿಯಿಂದ ಆರನೇ ತರಗತಿ ವರೆಗೆ ಕಲಿಸಲು ತಕ್ಕುದಾಗಿವೆ.

ಶ್ರೀ| ಆಚಾರ್ಯರವರು 'ದಂತಧಾವನ' ಮೊದಲಾದ ಪ್ರಕಟಣೆಗಳಿಂದ ಶಿಶುಸಾಹಿತ್ಯ ರಚನೆಯಲ್ಲಿ ತಮ್ಮ ಸ್ಥಾನ ಸಲಿಸಿರುತ್ತಾರೆ. ಉತ್ತಮ ಲೇಖಕರೂ, ಕವಿಗಳೂ, ನಾಟಕಕಾರರೂ ಆಗಿದ್ದು, ಸಂಗೀತದಲ್ಲಿಯೂ ಪಾರಂಗತರಿರುವರು. ಮಕ್ಕಳ ಹಾಡುಗಳಂತೆ ಈ ಕೃತಿಗೂ ಕನ್ನಡ ನಾಡಿನ ಶಾಲಾಬಳಗದಿಂದ ಪ್ರೋತ್ಸಾಹ ದೊರೆತರೆ ಇಂಥ ಇನ್ನೂ ಹಲವು ಕೃತಿಗಳನ್ನು ಬೆಳಕಿಗೆ ತರುವೆವೆಂದು ವಿಜ್ಞಾಪಿಸುವ,

—**ಪ್ರಕಾಶಕರು.**

ಗಾನ ಕುಸುಮ

೧. ಓ ನೀರೇ ಬಾ ಬಾರೇ

ನೀರೇ ನೀರೇ ಓ ನೀರೇ | ನಿನ್ನನು ಕರೆವೆನು ಬಾ ಬಾರೇ ||

ಬಯಸುತ ನಿನ್ನನು ನಾ ಕುಡಿವೆ | ಬಾಯಾರಿಕೆಯನು ನೀ ಕಳೆವೆ |
ಕೈ ಮೈ ತೊಳೆಯಲು ನಾ ತರುವೆ | ಬಟ್ಟೆಯ ಒಗೆಯಲು ನೀ ಬರುವೆ
|| ನೀರೇ ||

ಕೆರೆ ಕಾಲುವೆಯಲಿ ತುಂಬಿರುವೆ | ಮನೆಯ ಬಾವಿಯಲಿ ಅಡಗಿರುವೆ ||
ತಿನ್ನುವ ವಸ್ತುವ ಬೆಯ್ಯಿಸುವೆ | ಶುಚಿ-ರುಚಿ ಊಟದಿ ಬಲು ಮೆರೆವೆ
|| ನೀರೇ ||

ನಿನ್ನನು ಕುದಿಸುತ ಬಿಸಿಗೈವೆ | ಮೀಯುವೆ ದೇಹಕೆ ಹಿತ ಕೊಡುವೆ ||
ಗಾಳಿಸುತಲಿ ಉಪಯೋಗಿಸುವೆ | ಆರೋಗ್ಯದಿ ನಾ ಬದುಕಿರುವೆ || ನೀರೇ |

ಸಾಗರದಲಿ ಉಪ್ಪಾಗಿರುವೆ | ಆವಿಯ ತೆರದಲಿ ಮೇಲಿರುವೆ ||
ಮಳೆಯ ರೂಪದಲಿ ಕೆಳಗಿಳಿವೆ | ಹೊಳೆಯ ಮಾರ್ಗದಲಿ ನೀ ಹೊಳೆವೆ
|| ನೀರೇ ||

ವಿಷಕ್ರಿಮಿ ನಾಶಕ ಔಷಧವ | ಕೊಡುತ ಮಾಡುವೆನು ನಿರ್ಮಲವ |
ಏತದಿ ಎಳೆಯುವ ಆನಂದ | ಮತ್ತೆ ಹರಿಯುವುದು ಏಂ ಚಂದ || ನೀರೇ ||

ಬಾವಿಯ ರಾಟೆಯ ಸರಸರದ | ಸೇದುವ ಶಬ್ದದ ಗರಗರದ ||
ಧ್ವನಿ ಕಿವಿಗೀಯುವ ಅತಿ ಮುದದ | ಆಟವ ನೋಡುವುದೇಂ ದಿನದ
|| ನೀರೇ ||

---

೨. ಶುದ್ಧ ನೀರು

ಕುಡಿಯೆ ಶುದ್ಧ ನೀರು ಬೇಕು | ಕುದಿಸಿ ನೀರ ತಣಿಸಬೇಕು ||
ಮೈಯ್ಯ ಕೊಳೆಯ ತೊಳೆಯಬೇಕು | ಬಿಸಿಯ ನೀರ ಬಳಸಬೇಕು ||

ಉಡಿಗೆ ತೊಡಿಗೆ ಒಗೆಯಬೇಕು । ಒಗೆಯೆ ಒಳಿತು ನೀರು ಬೇಕು ॥
ನೀರು ಬೆಳೆಯು ಬೆಳೆಯೆ ಬೇಕು । ಬೆಳೆಯು ಬೇಳೆ ಬೆಯ್ಯ ಬೇಕು ॥

ಅದುವೆ ಜನರ ಪ್ರಾಣವು । ಪ್ರಾಣಕೆಲ್ಲ ತ್ರಾಣವು ॥
ಎಲ್ಲರಾಶ್ರಯವು ಅದೆ । ಎಲ್ಲರಾಶ್ರಯದ ಸಂಧೆ ॥

ಮನೆಯ ಸುತ್ತ ಮುತ್ತ ಇರುವ । ಬಾವಿ ಕೆರೆಯ ನದಿಯ ಹರಿವ ॥
ನೀರು ಕೆಡದೆ ಇರುವ ತೆರದೆ । ನಾವು ಯತ್ನಗೈವ ಮುಂದಡೆ ॥

ಕೆಸರು ಕೊಳಚೆ ಒಸರನು । ಕೊಳದ ಕೊಳೆತ ನೀರನು ॥
ಸೇವಿಸಿದರೆ ಬಹಳ ಕೆಡುಕು । ಆಗುವುದದು ನಿತ್ಯ ತೊಡಕು ॥

ವಿಷದ ಕ್ರಿಮಿಗಳಿರುವವು । ನೀರಿನಲ್ಲಿ ಕಾಣವು ॥
ಬೆಂಕಿಯಲ್ಲಿ ಕಾಸಿ ಕುದಿಸಿ । ಕುಡಿಯಬೇಕು ಶುದ್ಧಗೊಳಿಸಿ ॥

---

೩. ನಿತ್ಯನಿಯಮ

ಬೆಳಕು ಹರಿವ ಮೊದಲೆ ಎದ್ದು । ಹೃದಯದ ಕೊಳೆ ಕಳೆದು ಬಂದು ॥
ಹಲ್ಲನುಜ್ಜಿ ಮುಖವ ತೊಳೆದು । ದೂರ ನಡೆದು ಬರುವುದು ।
ರೂಢಿಮಾಡಿಕೊಳುವುದು ।

ತಂಪು ಗಾಳಿ ಬೀಸೆ ಮೈಗೆ । ಇಂಪು ಗಾನ ತಾನೆ ಸಾಗೆ ॥
ಶ್ವಾಸಕೋಸ ಸ್ವಚ್ಛವಾಗೆ । ರೋಗಗಳುಜೆಗಳಿಲ್ಲ ನೀಗೆ ॥
ಇಹುದೆ ಮತ್ತೆ ಮನಕೆ ಬೇಗೆ ॥

ಅಂಗಸಾಧನೆಯನು ಗೈಯ್ಯೆ । ತನುಮನಗಳ ಶಕ್ತಿ ಬೆಳೆಯೆ ॥
ಓದುಬರಹ ವಿದ್ಯೆ ಕಲಿಯೆ । ಕಾರ್ಯನಿರತರಾಗಿಯೇ ॥
ಆಗುವರು ಉದಾರಿಯೇ ॥

ಗುಡಿಸಿ ಕಸವ ಒರೆಸಿ ನೆಲವ । ಶುಚಿಯ ಬೆಂಸಿ ಇರಿಸಿ ತಳವ ॥
ಕೂತು ಕಲಿವ ನಲಿವ ಜನವ । ಕಾಣುವವನು ಹರುಷವ ।
ತಳೆವ ಸದಾ ಹರಸುವ ॥

ತಿಳಿಯ ನೀರಿನಲ್ಲಿ ಮಿಂದು | ತೊಳೆದು ಮೈಯ್ಯನೆಲ್ಲ ಬಂದು |
ತಲೆಯ ಬಾಚಿ ಒಪ್ಪವಂದು | ಮಲಿನ ವಸನ ಒಗೆದು ತಂದು |
ತಳೆವುದುಚಿತ ಉಡುಪನಂದು ||

ಶುಚಿಯು ರುಚಿಯು ಸರಿಸಮವದು | ಒಂದನೊಂದು ಬೆರೆತಿರುವುದು |
ಹಿತದಿ ಮಿತದಿ ಸತತ ತಿಳಿದು | ಉಣುವು ತಿಣುವುದಾವುದೆಂದು |
ಶೋಧಿಸುತ್ತ ವರ್ತಿಸುವುದು ||

ಉಡುವ ತೊಡುವ ವಸ್ತ್ರದಲ್ಲಿ | ಉಣುವ ತಿನುವ ವಸ್ತುವಲ್ಲಿ |
ಇರುವ ಸರುವ ವಸತಿಯಲ್ಲಿ | ಕೊಳೆಯ ಕಳೆದು ಉಳಿಯುವಲ್ಲಿ ||
ಬದುಕಿ ಬಾಳಿ ಮೆರೆವೆವಿಲ್ಲಿ ||

---

೪. ಒಂದುಗೂಡಿ ಸಾಗುವ

ಭಾರತ ಸೋದರ ಜನರೇ | ಭಾರತ ಸೋದರಿಯರೇ ||
ಇನ್ನು ತಡವ ಮಾಡುವಿರೇ | ಮುನ್ನಡೆಯದೆ ನೋಡುವಿರೇ ||
ನಮ್ಮ ಒಲವು ಗೆಲುವು ನಿಲುವು | ನಮ್ಮ ಕುಲವು ಬಲವು ಛಲವು |
ನಮ್ಮ ಚೆಲುವ ಭಾರತವು | ರಮ್ಯವು ಬಲು ನಿರ್ಮಲವು ||
ಭಾರತದವರೊಂದುಗೂಡಿ | ಭಾರತಕಿಹ ಕುಂದ ದೂಡಿ ||
ಭಾರತವನು ಒಂದುಮಾಡಿ | ಭಾರತವನು ಕುಣಿಸಿ ಹಾಡಿ ||
ಒಂದೆ ಗುಡಿಯ ಹಿಡಿಯುವ | ಒಂದೆ ನುಡಿಯೊಳಾಡುವ ||
ಒಂದೆ ಗಾಡಿ ನಡೆಸುವ | ಒಂದುಗೂಡಿ ಸಾಗುವ ||

(ಮೇಲಿನ ಪದ್ಯವನ್ನು, 'ಭಾರತ' ಎನ್ನುವಲ್ಲಿ 'ಕನ್ನಡ' ಶಬ್ದವನ್ನಿರಿಸಿ ಹಾಡಲೂ ಬಹುದು.)

---

೫. ತಕಲಿಯೆ ಬಾರೈ

ತಕಲಿಯೆ ಬಾರೈ ಬಲಗೈಯ್ಯಲ್ಲಿ |
ಹಂಜಿಯ ಜತೆಯಲಿ ತಿರುಗೈ ಇಲ್ಲಿ ||

ತಕಲಿಯೆ ತಿರುಗೈ ಹಂಜಿಯ ಎಳೆಯೈ ।
ಚಂದದ ನೂಲಿನ ಎಳೆ ನೀ ಬಾರೈ ॥
ಬಿಳಿ ಬಿಳಿ ನೂಲೇ ಥಳಥಳ ಹೊಳೆಯೈ ।
ಅಂಗಿಯ ಬಟ್ಟೆಯ ಜತೆ ನೀ ಸೇರೈ ॥ ತಕಲಿಯೆ ॥

ಶಾಲೆಗೆ ಹೋಗಲು ಅಂಗಿಯು ಬೇಕು ।
ಅಂಗಿಯು ಆಗಲು ಬಟ್ಟೆಯು ಬೇಕು ।
ಬಟ್ಟೆಯ ನೇಯಲು ನೂಲಿದು ಬೇಕು ।
ನೂಲನು ನೂಲಲು ತಕಲಿಯು ಬೇಕು ॥ ತಕಲಿಯೆ ॥

ತಕಲಿಗೆ ಹತ್ತಿಯ ಹಂಜಿಯು ಬೇಕು ।
ಹಂಜಿಯ ಎಳೆಯಲು ಕಲಿಯಲು ಬೇಕು ।
ಎಳೆಯಲು ಕಲಿಯಲು ಶಾಲೆಯು ಬೇಕು ।
ಶಾಲೆಗೆ ನಿತ್ಯವು ಬರುತಿರಬೇಕು ॥ ತಕಲಿಯೆ ॥

೬. ಗುಲಾಬಿ ಗಿಡ

ಗುಲಾಬಿ ಹೂಗಳ ಗಿಡಗಳ ತರಿಸುವ ।
ಅವನ್ನು ಅಂಗಳದಲ್ಲಿಯೆ ಇರಿಸುವ ॥

ನೀರನು ಎರೆಯುವ ಅವುಗಳ ಬೆಳೆಸುವ ।
ಅದರಲಿ ಅರಳುವ ಹೂಗಳ ಪಡೆಯುವ ।
ಕಾಣುವ ಅಂದವು ಬಲು ಆನಂದವು ।
ಬೀರುವ ಗಂಧವು ಬಹಳ ಸುಗಂಧವು ॥ ಗುಲಾಬಿ ॥

ಹೆಂಗಸರೆಲ್ಲರು ಅದನು ಬಯಸುವರು ॥
ಮುಡಿಯಲಿ ಮುಡಿವರು ಹರುಷವ ತಳೆವರು ।
ದೇವರ ಪೂಜೆಗೆ ಒಯ್ಯುವ ಅವುಗಳ ।
ಅದು ನಮಗೀವುದು ದಿವ್ಯ ಸುಮಂಗಳ ॥ ಗುಲಾಬಿ ॥

೭. ವಠಾರ ಶುಚಿತ್ವ

ನಮ್ಮ ನಿಲಯುವ ಚಂದಗೊಳಿಸುವ |
ಆ ವಠಾರವ ಶುಚಿಯುಗೈಯ್ಯುವ ||

ಕತ್ತಿಯುನ್ನು ಹಿಡಿದು ಹುಲ್ಲ | ಕಿತ್ತು ಹಾಕಿ ದೊಡ್ಡ ಕಲ್ಲ ||
ನೆತ್ತಿ ದೂರ ಕೊಂಡು ಹಾಕಿ | ಸುತ್ತ ಕಸದ ಚೂರ ಹೆಕ್ಕಿ || ನಮ್ಮ ||
ಕಸದ ಪರಿಕೆ ತಂದು ಕಸದ | ಬುಟ್ಟಿಯೊಡನೆ ಬಂದು ಕಸವ |
ಗುಡಿಸಿ ತುಂಬಿ ಹೊತ್ತು ಕಸದ | ಹೊಂಡಹುಡುಕಿ ಹಾಕಿಬರುವ || ನಮ್ಮ ||

ದಾರಿಯುಲ್ಲಿ ಹುಲ್ಲು ಬೆಳೆದು | ದಾರಿಗಡ್ಡವೆಂದು ತಿಳಿದು |
ಹಾರೆಯುನ್ನು ಕೈಲಿ ಹಿಡಿದು | ಅದನು ಬಿಡದೆ ಅಗೆದು ತೆಗೆದು || ನಮ್ಮ ||

---

೮. ವೈಯುಕ್ತಿಕ ಶುಚಿ

ವೈಯುಕ್ತಿಕ ಶುಚಿಗೈಯ್ಯುವ ತೆರವ |
ತಿಳಿಯುವ ಅದನಾಚರಿಸುತಲಿರುವ ||

ಮುಂಜಾನೆ ಎದ್ದು ಹಲ್ಲುಗಳೆಲ್ಲವ |
ಮಾವಿನ ಎಲೆಯುಲಿ ಉಜ್ಜುವ ಉಗುಳುವ ||
ಮುಖವನು ತೊಳೆಯುವ ಸ್ನಾನವ ಮಾಡುವ ||
ತಲೆಯನು ಬಾಚುವ ಉಡುಪನು ತೊಡುವ || ವೈಯುಕ್ತಿಕ ||

ಉಗುರುಗಳೆಡೆಯಾ ಕೊಳೆಗಳ ಕಳೆಯುವ |
ಕಿವಿಯು ಕಡ್ಡಿಯಿಂ ಕಿವಿಕೊಳೆ ತೆಗೆಯುವ ||
ಕೈಕಾಲು ಮುಖವ ಆಗಾಗ ತೊಳೆವ |
ವಾರಕೊಮ್ಮೆ ಅಭ್ಯಂಜನವೆಸಗುವ || ವೈಯುಕ್ತಿಕ ||

---

೯. ಬಿಲ್ಲು ತಯಾರಿ

ಉಡುತ ತೊಡುತ ಮೈ ಮುಚ್ಚಲು ಬೇಕು |
ಅದಕ್ಕೆ ವಿಧವಿಧ ಬಟ್ಟೆಯು ಬೇಕು ||

ಬಟ್ಟೆಯು ನೂಲಿಂ ನೇಯಲು ಬೇಕು ।
ನೇಯಲು ನೂಲಿಗೆ ಹತ್ತಿಯು ಬೇಕು ॥

ಹತ್ತಿಯ ಹಂಜಿಯ ಮಾಡಲು ಬೇಕು ॥
ಹಂಜಿಗೆ ಅರಳೆಯ ಹೊಡೆಯಲು ಬೇಕು ॥
ಅರಳೆಯ ಹೊಡೆಯಲು ಬಿಲ್ಲದು ಬೇಕು ।
ಬಿಲ್ಲನು ಮಾಡಲು ಕಲಿಯಲು ಬೇಕು ॥ ಉಡುತ ॥

ಬಿದಿವನು ಶೀಳುತ ಮೂರಡಿ ಅಳೆವುದು ।
ಕಂಬಿಯು ಮಾಡುತ ತುಂಡರಿಸುವುದು ॥
ಅದನ್ನು ಕೆರೆಯುತ ನಯವನು ಗೈವುದು ।
ಎರಡೂ ತುದಿಯಲಿ ಗುರುತನು ಕೊರೆವುದು ॥ ಉಡುತ ॥

ಕಂಬಿಗೆ ಕಮ್ಮಿಯು ಉದ್ದವ ಅಳೆವುದು ।
ನೂಲನು ಕೊಯ್ಯುತ ಕಂಬಿಯರ್ಧವದು ॥
ವೃತ್ತದಿ ಬಗ್ಗಿಸಿ ನೂಲನು ಬಿಗಿವುದು ।
ಒಳ್ಳೆಯ ಬಿಲ್ಲನು ಮಾಡಲು ಕಲಿವುದು ॥ ಉಡುತ ॥

೧೦. ಹಿಡಿಸೂಡಿ ತಯಾರಿ

ತೆಂಗು ಮರದ ಸೋಗೆಗಳನು । ಹೆಣೆವ ಬದಲಿಗೆ ॥
ಸೋಗೆಗಳಲಿ ನಡುವೆ ಇರುವ । ಉದ್ದ ಕಡ್ಡಿಗೆ ।

ತಗಲಿ ಇರುವ ಎರಡು ಬದಿಗೆ । ಗರಿಗಳೆನುವೆವು ॥
ಚಿಕ್ಕ ಹರಿತ ಕತ್ತಿಯನ್ನು । ಕೈಲಿ ಹಿಡಿವೆವು ॥

ಗರಿಗಳನ್ನು ಕಡ್ಡಿಯಿಂದ । ಬೇರೆ ಗೈವೆವು ।
ಕಡ್ಡಿಗಳನು ಕೆರೆದು ಕೈಯ್ಯ । ಹಿಡಿಯಲಿಡುವೆವು ।

ಬುಡಕೆ ಹಗ್ಗವನ್ನು ಬಿಗಿದು । ಸೂಡಿ ಕಟ್ಟೆವು ॥
ಕಸವ ಗುಡಿಸಿ ನೆಲವ ಸತತ । ಸ್ವಚ್ಛವಿರಿಪೆವು ॥

೧೧. ಆಟದ ಬಯಲ ಶುಚಿತ್ವ

ಶುದ್ಧತನದ ಮಿತಿಯು ಮನೆಯು । ತನಕ ಮಾತ್ರ ಅದುವು ಇರದು ॥
ಮನೆಯು ಆಟ ಬಯಲ ಬಳಿಯು । ತನಕವು ಅದು ಇರುವುದು ॥

ಆಡುವಲ್ಲಿ ಓಡಿ ಮಾಡಿ । ಇರುವುದಿಲ್ಲವೇ? ॥
ಕಲ್ಲುಮುಳ್ಳು ಇದ್ದರದಕೆ । ಸಾಧ್ಯವಿರುವುದೇ? ॥
ಕಲ್ಲು ಎಡವಿ ಮುಳ್ಳು ಚುಚ್ಚಿ । ಹಾನಿಯಾಗದಂತೆ ॥
ಅಲ್ಲಿ ಸ್ವಚ್ಛತೆಯನು ಇರಿಸಬೇಡವೇ? ॥ ಶುದ್ಧ ॥

ಆಡುವಲ್ಲಿ ಕಣ್ಣಿಗಂದ । ಇರಬೇಡವೇ? ॥
ಅದಕೆ ಕಸದ ಕಡ್ಡಿಗಳನು ಇರಲು ಬಿಡುವುದೇ? ॥
ಅವುಗಳನ್ನು ಹೆಕ್ಕಿ ಬುಟ್ಟಿ । ಯಲ್ಲಿ ಹೊತ್ತು ಹೊಂಡದಲ್ಲಿ ॥
ಕೊಂಡುಹೋಗಿ ಎಸೆಯಬೇಡವೇ? ॥ ಶುದ್ಧ ॥

ಕತ್ತಿಯಿಂದ ಗರಿಕೆ ಹುಲ್ಲ । ಕೊಯ್ಯಬೇಡವೇ? ॥
ಹಿಡಿಯುಸೂಡಿಯನ್ನು ಹಿಡಿದು ಗುಡಿಸದಿರುವುದೇ? ॥

ಕೊಡದಿ ನೀರ ಸೇದಿ ಬಾಲ । ಯಲ್ಲಿ ಹೊಯ್ದು ತರುತ ಅಲ್ಲಿ ॥
ಅದನು ಚುಮುಕಿಸುವುದು ಬೇಡವೇ? ॥ ಶುದ್ಧ ॥

ತಿಳಿಯು ಶುದ್ಧ ಗಾಳಿ ಬೀಸಿ । ಬರುವುದಿಲ್ಲವೇ? ॥
ಅದರ ಸೇವನೆಯನು ನಾವು । ಮಾಡದಿರುವುದೇ? ॥
ಅದುವೆ ನಮಗೆ ರೋಗ ಬರಲು । ಎಡೆಯು ಕೊಡದೆ ಇರಲು ಅಲ್ಲಿ ॥
ಅದನು ನಾವು ಗಳಿಸಬೇಡವೇ? ॥ ಶುದ್ಧ ॥

---

೧೨. ಕೈಕಾಲು ತೊಳೆಯುವುದು

ಬಾವಿ ಕಟ್ಟೆ ಬಳಿಗೆ ನಾವು । ಸಾಲಿನಲ್ಲಿ ತೆರಳುವ ॥
ಕೈಯ್ಯಕಾಲ ತೊಳೆದು ಬರುವು । ದಕ್ಕೆ ಬೇಗ ಹೋಗುವ ॥
ಉಣ್ಣುವುದಕೆ ತಿನ್ನುವುದಕೆ । ಮೊದಲು ತೊಳೆಯದಿದ್ದರೆ ॥
ಶಾಲೆಯಿಂದ ಮನೆಗೆ, ಅದಕೆ । ದೂರ ತಿರುಗಿ ಬಂದರೆ ।

ಕೈಯ್ಯಕಾಲ ಧೂಳು ಮೈಗೆ । ಬಂದು ಅಂಟುತ್ತಿದ್ದರೆ ॥
ರೋಗರುಜೆಯು ಒದಗಿ ನಮಗೆ । ಕಷ್ಟವಾಗದಂತಿರೆ ॥ ಬಾವಿ ॥

ಉಗುರಿನೆಡೆಯ ಕೊಳೆಯ ಕಳೆದು । ಅವನು ಸ್ವಚ್ಛಗೈಯ್ಯುವ ॥
ತಿನ್ನುವಂದು ಉಣ್ಣುವಂದು । ಕೊಡುವ ಅದಕೆ ಗಮನವ ॥

ಬಾಲ್ದಿಯಿಂದ ನೀರ ತಂದು । ಚೆಂಬಿನಿಂದ ತೆಗೆಯುವ ॥
ಕೈಯ್ಯ ಮೈಯ್ಯ ತಿಕ್ಕಿ ಕಿರಿದು । ಬಟ್ಟೆಯಿಂದ ಒರೆಸುವ ॥ ಬಾವಿ ॥

---

೧೩. ಶರ್ಬತ್ತು ಕುಡಿಯುವ

ಬಾ ಬಾ ಬಾಯಾರಿಕೆ ಆಗುವುದು ।
ಶರ್ಬತ್ತು ಕುಡಿವ ಎಂದೆನಿಸುವುದು ॥
ಕುಡಿಯಲು ಚೆಲುವಿನ ಗ್ಲಾಸನು ತೊಳೆಯುವ ।
ಚೂರಿಯ ತರುತಲಿ ನಿಂಬೆಯ ಕೊಯ್ಯುವ ॥

ಪಾತ್ರೆಗೆ ಸಕ್ಕರೆ ನೀರನು ಹಾಕಿ ।
ಚಮಚದಿ ಚಂದದಿ ತಿರುಗಿಸಿ ಕದಕಿ ॥
ಲಿಂಬೆಯ ಹಣ್ಣನು ಹಿಂಡುವ ಅದಕೆ ।
ಸಿಹಿ ಸಿಹಿ ಪಾನೀಯವ ಕುಡಿವುದಕೆ ॥ ಬಾ ಬಾ ॥

ಕುಡಿದರೆ ಹೃದಯವು ತಣಿಯುವುದಲ್ಲದೆ ।
ಆರೋಗ್ಯಕೆ ಹಿತಕರವಹುದಲ್ಲದೆ ॥
ದಿವ್ಯ ಔಷಧಕೆ ಸಮವೆಂದಲ್ಲದೆ ।
ಅಮೃತದಂತಿರುವ ರುಚಿ ಅದರಲ್ಲಿದೆ ॥ ಬಾ ಬಾ ॥

---

೧೪. ಬಟ್ಟೆಯ ಒಗೆಯುವ

ಬಟ್ಟೆಯ ಒಗೆಯುವ ಒಟ್ಟಿಗೆ ತೆರಳುವ ।
ಬಾವಿಯ ಬಳಿ ನಾವಿರುವ ॥

ನೀರನು ಕೊಡದಿಂ ಸರಸರ ಸೇದುವ ।
ಹಾಸಿದ ಕಲ್ಲಿನ ಬಳಿ ತರುವ ॥
ಪಾತ್ರೆಗೆ ಹೊಯ್ಯುರ ಒದ್ದೆಯ ಮಾಡುವ ॥
ಸಾಬೂನನು ಹಚ್ಚುತಲಿಡುವ ॥ ಬಟ್ಟೆಯ ॥

ಕೈಯ್ಯಲಿ ಕುಲುಕುತ ಬಲದಲಿ ಒಗೆಯುವ ॥
ನೀರಲಿ ತೊಳೆಯುತ ಕೊಳೆ ಕಳೆವ ॥
ಹಿಂಡುತ ಝಾಡಿಸಿ ಅದನು ಒಣಗಿಸುವ ।
ಒಳ್ಳೆಯ ಉಡುಪುಗಳನು ಉಡುವ ॥ ಬಟ್ಟೆಯ ॥

ಮೈಲಿಗೆ ಬಟ್ಟೆಯನುಟ್ಟರೆ ನಾರುತ ।
ಹುಟ್ಟುವ ಕಜ್ಜಿಯು ಕಾಣುತ್ತ ॥
ನಮ್ಮನು ನೋಡಲು ಮುಟ್ಟಲು ಹೇಸುತ ।
ಜೈವರು ‘ಬರದಿರು’ ಎನ್ನುತ್ತ ॥ ಬಟ್ಟೆಯ ॥

೧೫. ಮಾರ್ಗಸಂಚಾರ

ಊರಿಂದೂರಿಗೆ ಹೋಗಲು ಸುಲಭವು । ಉತ್ತಮ ಮಾರ್ಗಗಳಿರುತಿಹವು ।
ಬಸ್ಸು ಕಾರು ಮೊದಲಾದ ವಾಹನವು । ಓಡುತಲಿರುವುದ ನೋಡುವೆವು ॥

ಅವುಗಳಲಿ ನಾವು ಕುಳಿತುಕೊಳ್ಳುವೆವು । ಎಲ್ಲಿಂದೆಲ್ಲಿಗು ತೆರಳುವೆವು ।
ಲಾರಿಗಳಲ್ಲಿಯು ಸರಕನಿರಿಸುವೆವು । ಎಲ್ಲಿಂದೆಲ್ಲಿಗು ಕಳಹುವೆವು ॥
॥ ಊರಿಂದೂರಿಗೆ ॥

ಡಾಮರು ಹಾಕಿದ ರಸ್ತೆಗಳೆಲ್ಲವು । ನೋಡಲು ನಡೆಯಲು ಬಲು ಚೆಲುವು ॥
ಗಾಡಿಯ ಗಡಗಡ ಶಬ್ದವು ಕೇಳವು । ಧೂಳನು ತಿನ್ನುವ ಪರಿ ಇರವು ॥
॥ ಊರಿಂದೂರಿಗೆ ॥

ಮೈಲುಕಲ್ಲುಗಳು ಅಲ್ಲಲ್ಲಿರುವವು । ಮಾರ್ಗದ ದೂರವ ತಿಳಿಯುವೆವು ।
ಜೋಡು ಮಾರ್ಗದಲಿ ಇದೆ ಕೈಕಂಬವು । ಊರಿನ ಕವಲನು ಕಾಣುವೆವು ॥
॥ ಊರಿಂದೂರಿಗೆ ॥

೧೬. ಕರಿಹಲಗೆ ಮತ್ತು ಧೂಳೊರಸು

ಕರಿಹಲಗೆಯಲಿ ಬರೆವುದ ಓದಿ । ಕಲಿವೆವು ಪಾಠವ ಬಹು ಮುದದಿ ॥
ಶಬ್ದಾಕ್ಷರಗಳು ಶುದ್ಧವಿಹವು ಅದು । ತಪ್ಪದ ತೆರದಲಿ ಕಾಣುವುದು ॥
ಓದಿ ಬರೆವುದನು ಶುದ್ಧಗೊಳಿಸುವುದು । ಎರಡನೆ ಅಧ್ಯಾಪಕ ಅಹುದು ॥
॥ ಕರಿ ॥

ಕಪ್ಪು ಬೋರ್ಡಿನಲಿ ಬರೆದುದನಳಿಸುವ । ದಕೆ ಉಪಕರಣವ ಬಳಸುವೆವು ।
ಅದನ್ನು 'ಡಸ್ಟರ್' ಎಂದು ಅನ್ನುವೆವು । ಧೂಳೊರಸೆಂದೂ ಹೇಳುವೆವು ॥
॥ ಕರಿ ॥

ಧೂಳಿನ ಒರಸನು ಮಾಡುವ ಪರಿಯನು । ತಿಳಿವೆನು ಅದರಿಂದೊರೆಸುವೆನು ॥
ಹೊಸ ಹೊಸತನು ಅದರಲಿ ಬರೆಯುವುದನು । ನೋಡಿ ಜ್ಞಾನವನು
ಪಡೆಯುವೆನು ॥ ಕರಿ ॥

ಹತ್ತಿಯು ಕಸವನು ಹೆಕ್ಕುವಾ ಸಮಯ । ಅದರಲಿ ದೊರಕುವ ಕಸಗಳನು ॥
ಅರಳೆಯು ಹೊಡೆವಾಗಲು ಉಳಿವರಳೆಯು । ನೂಲುವ ನೂಲಿನ ತುಂಡನ್ನು ॥
॥ ಕರಿ ॥

ಒಟ್ಟಾಗಿರಿಸುತ ಬಟ್ಟೆಯ ಚೀಲದಿ । ಸೂಜಿನೂಲಿನಲಿ ಹೊಲಿಯುವೆವು ॥
ಅಂತಹ ಕಚ್ಚಾಮಾಲನು ಎಸೆಯದೆ । ಶೇಖರಿಸಿಡುವೆವು ಅನುದಿನವು ॥
॥ ಕರಿ ॥

ದಿಂಬು ಹಾಸಿಗೆಯು ಬಗೆಬಗೆ ಗೊಂಬೆಯು । ಇತರ ವಸ್ತುಗಳ ರಚಿಸುವೆವು ।
ಅದರಲಿ ಡಸ್ಟರ್ ನಮಗತಿ ಬಳಕೆಯು । ವಸ್ತುವು ಕ್ಲಾಸಿಗೆ ಅವಶ್ಯವು ॥
॥ ಕರಿ ॥

---

೧೭. ತಕಲಿಯಲ್ಲಿ ನೂಲುವ

ತಕಲಿಯಲ್ಲಿ ನೂಲುವ । ಸುಖಾಸನದಿ ಕೂರುವ ॥
ಪದ್ಮಾಸನವಾಗಬಹುದು । ಲೇಖಾಸನವಾಗಬಹುದು ॥
ಬೆಳಕು ಕಣ್ಣು ಕುಕ್ಕದಿರಲಿ । ನೂಲ ಮೇಲೆ ಬೀಳುತಿರಲಿ ॥
ಗಾಳಿ ಹೆಚ್ಚು ಬೀಸದಿರಲಿ । ನೂಲು ಕಡಿದು ಹೋಗದಿರಲಿ ॥
ಎಡದ ಕೈಲಿ ಹಂಜಿ ಹಿಡಿವ । ಬಲದಿ ಬೂದಿ ಇಡುತ ತೆಗೆವ ॥
ಎಡದಿ ಮಂಡಿ ತೊಡೆ ಬಳಿಯಲಿ । ಇಡುವ ಹಂಜಿ ಕಾಗದದಲಿ ॥

ತೊಡೆಗೆ ತಾಗಿ ಕಾಗದವಿರೆ । ತಕಲಿ ನೇರ ತಿರುಗತಲಿರೆ ॥
ಹಂಜಿಯು ಕೆಳತುದಿಯು ಹಿಡಿವ । ಹಿರಿಯು ಕಿರಿಯು ಬೆರಳ ಪಡೆವ ।
ಉಂಗುರ ಬೆರಳಾಗಬಹುದು । ಮೇಲು ಭಾಗ ಹಿಂದಿರುವುದು ॥
ಮೊದಲು ಕಲಿಯುವವರು ತಕಲಿ । ನೆಲದ ಮೇಲೆ ನಿಲ್ಲಿಸಿಡಲಿ ॥
ಕೊಂಡಿಯು ಬಲದೆರಡು ಅರ್ಧ । ನೂಲು ತೆಗೆಯಲೈದು ಅರ್ಧ ॥
ಅದಕೆ ತಿರುವು ಕೊಡುತಲಿರುವ । ಮತ್ತೆ ನೂಲ ಸುತ್ತುತಿರುವ ॥

೧೮. ಭಾರೊ ಬೇಗ ಶಾಲೆಗೆ

ಬಾರೊ ಬೇಗ ಶಾಲೆಗೆ । ಕರೆದುಕೊಂಡು ಹೋಗುವೆ ॥
ಬಾರೆ ನಾನು ಶಾಲೆಗೆ । ಮನೆಗೆ ನೇರ ಹೋಗುವೆ ॥
ಮನೆಗೆ ಹೋಗಿ ಅಲ್ಲಿ ಇಲ್ಲಿ । ಅಲೆಯುತಿರುವೆಯಲ್ಲವೇ? ॥
ಅಲೆವುದಿಲ್ಲ ಸುಮ್ಮನೆ ಮನೆ । ಯಲ್ಲಿ ಕುಳಿತುಕೊಳ್ಳುವೆ ॥
ಸುಮ್ಮನೆ ಸೋಮಾರಿಯಾಗಿ । ಕಾಲ ಕಳೆವುದುಚಿತವೇ? ॥
ಸುಮ್ಮನಿಲ್ಲ ಅಮ್ಮನೊಡನೆ । ಮಾತನಾಡಿ ಕಳೆಯುವೆ ॥
ಕೆಲಸವಿಲ್ಲದಲಸಿಯಾಗಿ । ಹರಟೆ ಹೊಡೆವುದುಚಿತವೇ? ॥
ಕೆಲಸವಿಲ್ಲವಲ್ಲ ಮತ್ತೆ । ನಾನು ಏನು ಮಾಡುವೆ? ॥
ಕೆಲಸ ನಮ್ಮ ಶಾಲೆಯಲ್ಲಿ । ನಿಯಮಿತವಾಗಿರುವುದು ॥
ಯಾವ ಕೆಲಸವಿರುವುದಲ್ಲಿ । ಕಷ್ಟವೆಂಬುದಿಲ್ಲವೇ? ॥
ಕಲಿವ ಕೆಲಸವಿರುವುದಲ್ಲಿ । ಸುಲಭವಾಗಿ ತಿಳಿವುದು ॥
ಯಾವ ಕಲಿವ ಕೆಲಸವಲ್ಲಿ । ನಲಿವ ಕಾರ್ಯವಿಲ್ಲವೇ? ॥
ಪಾಠ ಕಲಿವ ಒಲಿವ ನಲಿವ । ಕೆಲಸ ಕಲಿಸಿ ಕೊಡುವರು ॥
ಕಲಿಸುವವರು ಯಾರು ಅವರು । ಬೆದರಿಸುತ್ತಿಹರಲ್ಲವೇ? ॥
ನಲಿಸುತವರು ಕಲಿಸುತಿಹರು । ಕರುಣೆ ತೋರಿ ಕರೆವರು ॥
ಬರುವೆನಿರುವೆ ಕಲಿವೆ ನಲಿವೆ । ಶಾಲೆಯನ್ನು ಸೇರುವೆ ॥
ಬಾರೊ ಬೇಗ ನನ್ನ ಜತೆಗೆ । ಕರೆದುಕೊಂಡು ಹೋಗುವೆ ॥
ಬರುವೆನೀಗ ನಿನ್ನ ಜತೆಗೆ । ಕೂಡಿಕೊಂಡು ಸಾಗುವೆ ॥

'ಗಾನಕುಸುಮ'ದ ಸ್ವರಸಾಹಿತ್ಯ

ಗಗರಿ ಗಾಮ ಮಸಸ ಸಾಸ
ಬಿಸಿಯ ನೀರ ಬಳಸ ಬೇಕು

ಧಧಧ ಧಧಮ ಧನಿನಿ ಸಾಧ
ಉಡಿಗೆ ತೊಡಿಗೆ ಒಗೆಯ ಬೇಕು

ನಿಸಸ ನಿಧನಿ ನಿಸಸ ಸಾಸ
ಒಗೆಯೆ ಒಳಿತು ಸಿಇರು ಬೇಕು

ಸಾಗ ಸಸಗ ಸಸನಿ ಧಾಪ
ನೀರು ಬೆಳೆಯು ಬೆಳೆಯುಬೇಕು.

ಮಮಪ ಧಾನಿ ಸೀಗ ಗಾಗ
ಬೆಳೆಯು ಬೇಳೆ ಬ್ಯೆಯ್ಯುಬೇಕು.

[ರಿ. ಗ. ಮ. ಧ. ನಿ.
2. 1 1 1 1]

ಹಾಡು (5)

ಸಸಸನಿ ಸರಿಗರಿ ಸಾ; ಸಾ;
ತಕಲಿಯೆ ಬಅರ್ರೈಇ ಈ ಈ

ಸಸಸನಿ ಸರಿಗರಿ ಸಸಸನಿ ಸರಿರೀ
ತಕಲಿಯೆ ಬಲಿರ್ರೈಇ ಬಲಗ್ರೈಇ ಯ್ಯಅಕ್ಷೀ

ರಿಪಮಮಗ ಗರಿಸರಿ ನಿಸನಿರಿ ಸಾಸಾ
ಹಅಂಜಿಯ ಜತೆಯಲಿ ತಿರುಗ್ರೈಇ ಇಲ್ಲೀ

ಸಸಸನಿ ಸರಿಗರಿ ಸಾ; ಸಾ;
ತಕಲಿಯೆ ಬಅರ್ರೈಇ ಈ ಈ

ಪಪಪಪ ಮಗಗಮ ಮಪಪಪ ಪಪಧಪ
ತಕಲಿಯೆ ತಿರುಗ್ರೈಇ ಹಅಂಜಿಯೆ ಎಳೆಯ್ಯೆ

ಮಗಮಪಪ ಮಗಗರಿ ರಿಗಮಾ ಗಾರೀ
ಜತಅಂದದ ನೂಉಲಿನ ಎಳೆನೀ ಬಾರ್ರೈ

ನಿನಿನಿನಿ ನಿಧಪಮ ಮಧನಿಸ ನಿಧಪಾ
ಜಿಳಿಬಿಳಿ ನೂಉಲೆಎ ಪಳಪಳ ಹೊಳೆಯ್ಯೆ

ಪಾಮಪ ಮಗಗರಿ ರಿಗಮಾ ಗಾರೀ
ಅಂಗಿಯು ಬಅಟ್ಟೆಯು ಜತೆನೀ ಸೇರ್ರೈ

[ನಿ. ರಿ. ಗ. ಮ. ಧ. ಧ. ನಿ.
2 2 1 1 1 2 1]

ಹಾಡು (7)

ಸಾನಿ ನಿನಿನಿ ಸಾ, ಸಾರಿ
ನಮ್ಮ ನಿಲಯ ವಾ ಆಅ

ಪಾಮ ಗರಿರಿ ಸಾ, ಸಾ,
ಚಂದ ಗೊಳಿಸು ವಾ

ಮಾಮ ಮಾಮ ಮಪಧ ಧಾ,
ಆವ ತಾರ ವಅಅ ಅ

ಪಪಪ ಮಾಮ ಗಾಗ ರೀಸ
ಶುಚಿಯ ಗ್ಯೆಯ್ಯು ವಾಅ ಅಅ
(ನಮ್ಮ)

ಮಾಮ ಮಾಮ ಪಪಪ ಪಾಪ
ಕತ್ತಿ ಯನ್ನು ಹಿಡಿದು ಹುಲ್ಲ

ಧಾಧ ಧಾಧ ಪಾಮ ಮಾಪ
ಕಿತ್ತು ಹಾಕಿ ದೊಡ್ಡ ಕಲ್ಲ

ಪಾಧ ಸಾಸ ನೀಧ ಪಾಧ
ನೆತ್ತಿ ದೂರ ಕೊಂಡು ಹಾಕಿ

ಸಾನಿ ಧಧಪ ಮಾಗ ರಿರಿಸ
ಸುತ್ತ ಕಸದ ಚೂರ ಹೆಕ್ಕಿ

[ರಿ. ಗ. ಮ. ಧ. ನಿ.
1 2 1 1 2]

ಹಾಡು (9)

ನಿನಿನಿನಿ ಸಸರಿಸ ಗಮರಿಸ ರಿಸಸಾ
ಉಡುತತೊ ಡುತಮ್ಮೈ ಮುಚ್ಚಲು ಬೆಏಕು

ಸಮಾಮ ಮಮಮಮ ಪಧಮಮ ಗಮರಿಸ
ಅದಕ್ಕೆ ವಿಧವಿಧ ಬಅಟ್ಟೆಯು ಬೆಏಕುಉ
(ಉಡುತ)

ಸಾಸಸ ನಿಧಧಪ ಪದದನಿ ಪದಪಾ
ಬಟ್ಟೆಯು ನುಉಲಿಇಂ ನೆಏಯುಲು ಬೆಏಕು

ಸಮಮಮ ಮಾಮಮ ಪಧಮಮ ಗಮರಿಸ
ನೆಏಯುಲು ನೂಲಿಗೆ ಹಅತ್ತಿಯು ಬೆಏಕುಉ
(ಉಡುತ)

ಮಾಮಮ ಮಾಮರಿ ಪಾಪಪ ಮಧಪಾ
ಹತ್ತಿಯು ಹಂಜಿಯು ಮಾಡಲು ಬೆಏಕು

ನೀನಿಸ ನಿಧಧಪ ಧಧನಿ ಪದಪಾ
ಹಂಜಿಗೆ ಅರಳೆಯು ಹೊಡೆಯುಲು ಬೆಏಕು

ಸಸಸಸ ಸಸಸರಿ ನಿನಿಧಪ ದಪಮಾ
ಅರಳೆಯು ಹೊಡೆಯುಲು ಬಿಇಲ್ಲದು ಬೆಏಕು

ಮಾಮಮ ಮಾಮಮ ಪದಮಪ ಗಮರಿಸ
ಬಿಲ್ಲನು ಮಾಡಲು ಕಲಿಯುಲು ಬೆಏಕುಉ.
(ಉಡುತ)

[ರಿ. ಗ. ಮ. ಮ. ಧ. ನಿ.
2 2 1 2 2 2]

ಹಾಡು (11)

ಪಾಪ ಪಪಪ ಪಪಪ ನಿಧಪ
ಶುದ್ಧ ತನದ ಪಿಂತಿಯು ಮನೆಯು

ಮಪಮ ಪಾಮ ಗಗರಿ ಸಸನಿ
ತನಕ ಮಾತ್ರ ಅದುವು ಇರದು

ಸಸರಿ ರೀಗ ದಿಪಪ ಮಮಗ
ಮನೆಯು ಆಟ ಬಯುಲ ಬಳಿಯು

ರಿರಿಗ ರಿರಿಸ ಸಸಸ ಸಾ;
ತನಕ ವುಅದು ಇರುವುದೂ.

ರೀರಿ ಮಾಪ ಪಾಪ ಪಾಪ
ಆಡು ವಲ್ಲಿ ಓಡಿ ಮಾಡಿ

ಪಪಧ ಪಪಮ ಪಾ, ಪಾ,
ಇವುವು ದಿಇಲ್ಲ ನೇ ಏ

ನೀನಿ ನೀನಿ ಧಾಧ ಪಪಮ
ಕಲ್ಲು ಮುಳ್ಳು ಇದ್ದ ರದಕೆ

ಪಾಪ ಪಧಮ ಪಾ, ಪಾ,
ಸಾಧ ವಿರುವು ದೇ ಏ.

ಮಾಮ ಪಪಪ ನೀನಿ ಸಾಸ
ಕಲ್ಲು ಎಡವಿ ಮುಳ್ಳು ಚುಚಿ

ನಿಸನಿ ಸರಿಸ ನೀಧ ಪಾಪ
ಹಅನಿ ಯುಆಗ ದಂತೆ ಅಲ್ಲಿ

ನೀನಿ ನಿನಿಪ ಪಧಪ ಪಮಮ
ಸ್ವಚ್ಛ ತೆಯುನು ಇರಿಸ ಬೆಏಡ

ಪಾ, ಪಾ, ಪಾ, ಪಾ,
ನೇ ಏ ಏ ಏ.

(ಶುದ್ಧ)

[ನಿ. ರಿ. ಗ. ಮ. ಧ. ದ. ನಿ.
2 2 1 1 1 2 1]

ಹಾಡು (14)

ಸಾಸನಿ ಸರಿಗರಿ ಸಾಸನಿ ಸರಿಗರಿ
ಬಟ್ಟೆಯು ಒಗೆಯುವ ಒಟ್ಟಿಗೆ ತೆಳಳುವ
ಸಾಸನಿ ಸರಿಗರಿ ರಿಸಸಾ ಸಾ;
ಬಾವಿಯು ಬಳಿನಅ ವಿರುವಾ ಅ.
ಪಾಪಪ ದನಿಸರಿ ಸನಿನಿಧ ದಪಪಮ
ನೀರನು ಕೊಡದಿಂ ಸರಸರ ಸಎದವ
ಮಪಪಮ ಪದನಿದ ಧಪಪಪ ಪಾ;
ಹಳಸಿದ ಕಅಲ್ಲಿನ ಬಳಿತರು ವಾ
ನೀನಿಧ ದಪಪಮ ಮಗಗರಿ ರಿಸಸನಿ
ಪಾತ್ರೆಗೆ ಕೊಬಯ್ಯುತ ಒಬದ್ದೆಯು ಮಅಡುವ
ಸಾಸನಿ ಸರಿಗರಿ ರಿಸಸಸ ಸಾ:
ಸಾಬೂಉ ನನುಹಅ ಚ್ಚುತಲಿಡುವಾ.

(ಬಟ್ಟೆಯು)

[ನಿ. ರಿ. ಗ. ಮ. ದ. ನಿ.
2 2 1 1 2 1]

ಹಾಡು (16)

ಸಸಸಸ ಸಸಸಾ ನಿರಿಸನಿ ಧಪಧಾ
ಕರಿಹಲ ಗೆಯುಲೀ ಬರವುದ ಒಬದೀ
ಪಧಪಮ ಗಪಧನಿ ಪಧಪಮ ಗರಿಸಾ
ಕಲಿವೆವು ಪಅದವ ಬಹುಮುದದಿಇಈ.
ಮಾಪಮಾ ಮಮಮಮ ಪಾಪದ ಧಧನಿನಿ
ಶಬ್ದಾ ಸ್ವರಗಳು ಶುದ್ಧವಿ ಹವುಅದು
ನಿಸನಿಪ ಪಧಪಮ ಗಪಧರಿ ಸಾ;
ತಅಪ್ಪದ ತೆರದಲಿ ಕಲಿಉವು ದು.
ರೀರಿರಿ ರಿರಿರಿಸ ಧಸರಿಗ ರಿಸಸಸ
ಓದಿಬ ರೆವುದನು ಶುಉದ್ಧಗೊಳಿಸುವುದು
ನಿಸನಿಸ ನಿದದಪ ಮದಪಮ ಗಪದರಿ
ಎರಡನೆ ಅಅಧ್ಯಅ ಪಕಅಹು ದುಉಉ

(ಕರಿ)

[ರಿ. ಗ. ಮ. ದ. ನಿ.
2 2 1 2 2]

ಹಾಡು (18)

ಧಾದ ಪಾಪ ಮಾರಿ ಸಾ,
ಬಾರೊ ಬೇಗ ಶಾಲೆ ಗೇ
ರಿರಿರಿ ಮಾಮ ಪಮಧ ಪಾ,
ಕರೆದು ಕೊಂಡು ಹೋಬಗು ವೇ
ದಾಸ ದಾಸ ದಾಸ ಸಾ;
ಬಾರೆ ನಾನು ಶಾಲೆ ಗೇ
ದದದ ದಾಪ ಮಾದ ಪಾ,
ಮನೆಗೆ ನೇರ ಹೋಗು ವೇ

ಪಪಮ ಪಾದ ಸಾದ ಸಾಸ
ಮನೆಗೆ ಹೋಗಿ ಅಲ್ಲಿ ಇಲ್ಲಿ

ಸರಿರಿ ರಿಸಸ ಧಾಪ ಮಾ,
ಅಲೆಯು ತಿರುವೆ ಯಲ್ಲ ವೇ

ರಿರಿಮ ರೀಮ ರೀರಿ ಸಸಸ
ಅಲೆವು ದಿಲ್ಲ ಸುಮ್ಮ ನೆಮನೆ

ಧಾಸ ಧಧಪ ಮಾಧ ಪಾ,
ಯಲ್ಲಿ ಕುಳಿತು ಕೊಳ್ಳು ವೇ

[ರಿ. ಮ. ದ.
೨ 1 2]

ವಿ. ಸೂ.:

ತಾಳ ಮತ್ತು ರಚನೆಯ ಸಾಮ್ಯದಿಂದ 1, 5, 14, 16ನೇ ಹಾಡುಗಳ ಸ್ವರಗಳನ್ನು 1, 5, 6, 8, 14, 16, 19ನೇ ಹಾಡುಗಳೆಲ್ಲಕ್ಕೂ, 2, 7, 11, 18ನೇ ಹಾಡುಗಳ ಸ್ವರಗಳನ್ನೂ, 2, 3, 4, 7, 10, 11, 12, 17, 18, 20ನೇ ಹಾಡುಗಳೆಲ್ಲಕ್ಕೂ, 9ನೇ ಹಾಡಿನ ಸ್ವರವನ್ನು 13, 15ನೇ ಹಾಡುಗಳಿಗೂ, ಪರಸ್ಪರ ಅನ್ವಯಿಸಿಕೊಂಡು ಹಾಡಲುಬರುತ್ತವೆ.

ಇದು ಹಾಡಲು ಏರ್ಪಡಿಸಿದ ಒಂದು ಸ್ಥೂಲ ಮಾರ್ಗದರ್ಶನ ಮಾತ್ರ. ಇದನ್ನು ಈ ಧಾಟಿಯ ಆಧಾರದಿಂತ ಇನ್ನೂ ಅಂದವಾಗಿ ಹಾಡಲು ಅಭ್ಯಾಸಮಾಡಿಕೊಳ್ಳುವ ಅಗತ್ಯವಿರುತ್ತದೆ. ಅಥವಾ ಬಲ್ಲವರು ಈ ಹಾಡುಗಳನ್ನು ಇವುಗಳ ಶಬ್ದಾಕ್ಷರಗಳ ಹ್ರಸ್ವದೀರ್ಘಗಳ ಉಚ್ಚಾರ ವ್ಯತ್ಯಾಸವಾಗದಂತೆ, ಅದರಿಂದ ಹಾಡಿನ ಅರ್ಥ ಕೆಡದಂತೆ ತಮಗಿಷ್ಟಬಂದ ರಾಗ ಧಾಟಿಗಳಿಂದ ಹಾಡಬಹುದು.

ಸ್ವರ-ಸಂಯೋಜಕಿ: ಶ್ರೀಮತಿ ರಮಾದೇವಿ ಆಚಾರ್ಯ.

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1957ನೇ ಜುಲೈ ತಿಂಗಳ ನಾಲ್ಕನೆಯ ವಾರದ ವರೆಗೆ 147 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕ ಹೊರಡುತ್ತಲೇ ಇದೆ.

147 ಅಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 3078 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ ಒಂದಾಣೆಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

Edited, Printed & Published by K. V. Shenoy
at the Prabhat Printers, Ltd., Mangalore.